ಶ್ರೀ ಬಿ. ಎಸ್ ಪಾಟೀಲ್ ಸಾಸನೂರ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು).—

ಅ) ಹೌದು.

ಆ) ಔಷಧಿಗಾಗಿ ನಿಗದಿಪಡಿಸಿದ ರೂ. ೧೨,೦೦೦–೦೦ಗಳ ಆಯವ್ಯಯ ವೆಚ್ಚದಲ್ಲಿ ರೂ. ೭,೨೦೦–೦೦ಗಳನ್ನು ಔಷಧಿಗಳಿಗಾಗಿ ಈಗಾಗಲೇ ಕೇಂದ್ರಫಾರ್ಮಸಿ, ಬೆಂಗಳೂರು ಇವರಿಗೆ ಸರಬರಾಜು ಮಾಡಲಾಗಿದೆ. ಹಾಗೂ ಉಳಿದ ಸರಬರಾಜನ್ನು ಆದಷ್ಟು ಶೀಘ್ರದಲ್ಲಿಯೇ ಮಾಡಲಾಗುವುದು.

ಅವಶ್ಯಕ ಪಿಠೋಪಕರಣಗಳನ್ನು ಈಗಾಗಲೇ ಔಷದಾಲಯಗಳಿಗೆ ಸರಬರಾಜು ಮಾಡಲಾಗಿದೆ. ಇದಲ್ಲದೆ ರೂ. ೬೦೦೦–೦೦ ಮೊತ್ತದ ಇನ್ನಿತರ ಪಿಠೋಪಕರಣಗಳನ್ನು ಸರಬರಾಜು ಮಾಡಲು ಕ್ರಮ ಕೈಗೊಳ್ಳಲಾಗಿದೆ.

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.

೧೯೯೩-೯೪ನೇ ಸಾಲಿನಲ್ಲಿ ರಾಜ್ಯದಲ್ಲಿ ಮೆಡಿಕಲ್ ಸೀಟುಗಳ ಪ್ರವೇಶ

೪೬೫ (೭೨೨) ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ).—ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ರಾಜ್ಯದಲ್ಲಿ ಸನ್ ೧೯೯೩–೯೪ನೇ ಸಾಲಿನಲ್ಲಿ ಎಷ್ಟು ಮೆಡಿಕಲ್ ಸೀಟುಗಳನ್ನು ಮೆರಿಟ್ ಮೇಲೆ ಹಾಗೂ ಪೇಮೆಂಟ್ ಮೇಲೆ ಕೊಡಲಾಗಿದೆ ?

ಆ) ಅವುಗಳಲ್ಲಿ ಕರ್ನಾಟಕ ರಾಜ್ಯದವರು ಎಷ್ಟು ಜನ ಪೇಮೆಂಟ್ ಸೀಟುಗಳನ್ನು ಹಾಗೂ ಎಷ್ಟು ಜನ ಉಚಿತ ಸೀಟುಗಳನ್ನು ಪಡೆದಿರುವರು ? (ಜಿಲ್ಲಾವಾರು ಸಂಪೂರ್ಣ ವಿವರ ಒದಗಿಸುವುದು)

ಇ) ಕರ್ನಾಟಕ ರಾಜ್ಯದ ವಿದ್ಯಾರ್ಥಿಗಳಿಗೆ ಅದರಿಂದ ಅನ್ಯಾಯವಾದ ಸಂಗತಿ ಸರಕಾರದ ಗಮನಕ್ಕೆ ಬಂದಿದೆಯೇ ?

ಈ) ಈ ವರ್ಷ ಮೆಡಿಕಲ್ ಸೀಟುಗಳನ್ನು ಕೋಟಾ ಮಾರ್ಕ್ಸ್‌ಕಾರ್ಡ್ ಹಾಜರ್‌ಪಡಿಸಿ ಪ್ರವೇಶ ತೆಗೆದುಕೊಂಡ ಸಂಗತಿ ನಿಜವೇ ?

ಉ) ಈ ಕೋಟಾ ಸರ್ಟಿಫಿಕೆಟ್ ಕೊಟ್ಟು ಪ್ರವೇಶ ತೆಗೆದುಕೊಂಡ ವಿದ್ಯಾರ್ಥಿಗಳು ರಾಜ್ಯದಲ್ಲಿ ಎಷ್ಟಿರುವರು ಹಾಗೂ ಹೊರ ರಾಜ್ಯದ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ?

ಊ) ರಾಜ್ಯ ಸರ್ಕಾರದವರು ಅವರ ಮೇಲೆ ಯಾವ ಕ್ರಮ ಕೈಗೊಂಡಿರುವರು ?

ಶ್ರೀ ಜಿ. ರಾಮಕೃಷ್ಣ (ವೈದ್ಯಕೀಯ ಶಿಕ್ಷಣ ಸಚಿವರು).—

ಅ) ಮೆರಿಟ್ ಉಚಿತ ಸೀಟುಗಳು — ೧೮೦೦
ಪೇಮೆಂಟ್ ಸೀಟುಗಳು — ೮೬೫

ಆ) ಕರ್ನಾಟಕ ವಿದ್ಯಾರ್ಥಿಗಳಿಗೆ ಉಚಿತ ಸೀಟುಗಳು ನೀಡಿರುವುದು — ೧೮೦೦
ಪೇಮೆಂಟ್ ಆಧಾರದ ಮೇಲೆ ಕರ್ನಾಟಕದ ವಿದ್ಯಾರ್ಥಿಗಳಿಗೆ
ನೀಡಿರುವ ಸೀಟುಗಳ ಸಂಖ್ಯೆ — ೪೩೩
ಜಿಲ್ಲಾವಾರು ವಿವರ ಸಧ್ಯಕ್ಕೆ ಲಭ್ಯವಿರುವುದಿಲ್ಲ.

ಇ) ಇಲ್ಲ.

ಈ) ಹೌದು. ಕೆಲವು ಕೇಸುಗಳು ಸರ್ಕಾರದ ಗಮನಕ್ಕೆ ಬಂದಿದೆ.

ಊ) ಕರ್ನಾಟಕ ರಾಜ್ಯದ ವಿದ್ಯಾರ್ಥಿಗಳು — ೫
ಹೊರ ರಾಜ್ಯದ ವಿದ್ಯಾರ್ಥಿಗಳು — ೨೨
—
೨೭

ಊ) ಸದರಿ ವಿದ್ಯಾರ್ಥಿಗಳ ಪ್ರವೇಶವನ್ನು ರದ್ದು ಗೊಳಿಸಿ ಲೋಕಾಯುಕ್ತ ಇಲಾಖೆಯಿಂದ ನಿಖರವಾಗಿ ಒಳಪಡಿಸಲಾಗಿದೆ.